O.S. 112/2023

PW-1

**Witness duly sworn on 25.09.2025.**

**Further Examination in chief by Sri. M.A.N Advocate:**

I have produced copy of the report forwarded by village accountant Induru to Tahasildar Mundgod and it is marked as **Ex.P8**.I have produced Mutation entry at ME No. 1544 of Koppa Village and it is marked as **Ex.P9**. I have produced the letter addressed by Tahasildar Mundgod dated 11.02.2022 and and it is marked as **Ex.P10**. I have produced hand written RTC pertaining to Sy. No. 19 Situated Koppa Village of Mundgod Taluk for period 1999-2000 and it is marked as **Ex.P11**.

**ಪಾಟೀ ಸವಾಲುಃ ಶ್ರೀ ಆರ್.ಎಸ್.ಹೆಚ್ ಪ್ರತಿ ವಾದಿ ಪರ ವಕೀಲರಿಂದಃ**

ಮೃತ ಅಣ್ಣಪ್ಪ ಬಸಪ್ಪ ಕುಂಬಾರ ಇವರು ನನ್ನ ಮಾವ. ಅವರ ಪತ್ನಿಯ ಹೆಸರು ಶಾಂತವ್ವ ಅಣ್ಣಪ್ಪ ಕುಂಬಾರ. ಸದರಿ ಅಣ್ಣಪ್ಪ ಮತ್ತು ಶಾಂತವ್ವ ರವರಿಗೆ 6 ಜನ ಮಕ್ಕಳು. ಅವರೆಲ್ಲರೂ ಒಟ್ಟಿಗೆ ಇದ್ದಾರಾ ಎಂದರೆ, ನಾನು ಮದುವೆಯಾಗಿ ಬಂದಾಗಿನಿಂದ ಒಟ್ಟಿಗೆ ಇಲ್ಲ ಎಂದು ನುಡಿಯುತ್ತಾರೆ. ನನ್ನ ಮದುವೆಯಾಗಿ ಈಗ ಸುಮಾರು 25 ವರ್ಷಗಳಾಗಿವೆ. ನಾನು ಮದುವೆಯಾಗಿ ಬಂದಾಗ, ನಾನು ಮತ್ತು ನನ್ನ ಗಂಡ ನಮ್ಮ ಅತ್ತೆ ಮಾವನವರೊಂದಿಗೆ ಒಟ್ಟಿಗೆ ಇದ್ದೇವು. ನಾನು ಮದುವೆಯಾಗಿ ಬಂದಾಗ, ಸದರಿ ಅಣ್ಣಪ್ಪರವರು ಗಟ್ಟಿಯಾಗಿದ್ದರು ಮತ್ತು ಅವರು ಜಮೀನುಗಳಿಗೆ ಹೋಗಿ ಬಂದು ಮಾಡುತ್ತಿದ್ದರು ಎಂದರೆ ಹೌದು. ಸದರಿ ಅಣ್ಣಪ್ಪ ತನ್ನ ಮಕ್ಕಳೊಂದಿಗೆ ನಗುತ್ತಾ ಅನ್ಯೂನ್ಯವಾಗಿದ್ದರು ಎಂದರೆ, ನಾನು ಬಂದಾಗಿನಿಂದ ನೋಡಿರುವುದಿಲ್ಲ. ಸದರಿ ಅಣ್ಣಪ್ಪರವರಿಗೆ ಕೊಪ್ಪ ಗ್ರಾಮದಲ್ಲಿ ಎಷ್ಟು ಆಸ್ತಿಗಳು ಇದ್ದವು ಎಂದರೆ ನನಗೆ ನೆನಪಿಲ್ಲ. ಸದರಿ ಅಣ್ಣಪ್ಪ ತನ್ನ ಮಕ್ಕಳೊಂದಿಗೆ ಒಟ್ಟಿಗೆ ಸಾಗುವಳಿ ಮಾಡುತ್ತಿದ್ದನು ಎಂದರೆ, ಸಾಕ್ಷಿ ನಮ್ಮ ಮಾವನವರು ಅವರ ಮಕ್ಕಳಿಗೆ 1977 ನೇ ಸಾಲಿನಲ್ಲೇ ಆಸ್ತಿಯನ್ನು ಹಂಚಿರುತ್ತಾರೆ, ಅವರವರ ಪಾಲಿಗೆ ಬಂದ ಆಸ್ತಿಯನ್ನು ಅವರು ಸಾಗುವಳಿ ಮಾಡುತ್ತಾ ಬಂದಿರುತ್ತಾರೆ. 1977 ನೇ ಸಾಲಿನಲ್ಲಿ ನಾನು ಹುಟ್ಟಿರಲಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು, ಕಾಗದಗಳನ್ನು ನೋಡಿ ಹೇಳುತ್ತಿದ್ದೇನೆ ಎಂದು ನುಡಿಯುತ್ತಾರೆ. ಯಾವ ಕಾಗದವನ್ನು ನೋಡಿ ಹೇಳುತ್ತಿದ್ದೀರಿ ಎಂದರೆ, ಸಾಕ್ಷಿಯು ನಮ್ಮ ಮಾವನವರು ತೀರಿಕೊಂಡ ನಂತರ, ಅವರ ಕೋಣೆಯನ್ನು ಸ್ವಚ್ಚಗೊಳಿಸಲು ಹೋದಾಗ ಕಾಗದ ಸಿಕ್ಕಿದ್ದು ಅದನ್ನು ನೋಡಿ ಹೇಳುತ್ತಿದ್ದೇನೆ ಎಂದು ನುಡಿಯುತ್ತಾರೆ. ನಾನು ಮದುವೆಯಾಗಿ ಬಂದಾಗ, ನಮ್ಮ ಮಾವನವರೊಂದಿಗೆ ನಾನು, ನನ್ನ ಗಂಡ ಮತ್ತು ನಮ್ಮ ಅತ್ತೆಯರಿದ್ದೇವು ಎಂದು ನುಡಿಯುತ್ತಾರೆ. ನಮ್ಮ ಮಾವನವರ ರೂಮಿನಲ್ಲಿ ನಾವೆಲ್ಲರೂ ಕೂಡಿ ಇರುತ್ತಿದ್ದೇವು. ಸದರಿ ಕೋಣೆಯಲ್ಲಿ ಇದ್ದ ಕಪಾಟುಗಳನ್ನು ನಾನು ನೋಡಿರುತ್ತೇನೆ. ಅವುಗಳನ್ನು ನಾವು ದಿನಪ್ರತಿ ಸ್ವಚ್ಛಗೊಳಿಸುವ ಕಾಲಕ್ಕೆ ನೋಡುತ್ತಿದ್ದೇವು

ಎಂದರೆ, ನಮ್ಮ ಮಾವನವರು  ಅವುಗಳಿಗೆ  ಚಾವಿ ಹಾಕಿ ಇಡುತ್ತಿದ್ದರು. ನಾವು ಅವುಗಳನ್ನು ದಿನಪ್ರತಿ ಸ್ವಚ್ಚಮಾಡುತ್ತಿರಲಿಲ್ಲ ಎಂದು ನುಡಿಯುತ್ತಾರೆ.  ಸದರಿ ಅಣ್ಣಪ್ಪ ತಮ್ಮ ಜೀವಿತಾ ಕಾಲದಲ್ಲಿ ಕಪಾಟಿನಲ್ಲಿ ಇಡುತ್ತಿದ್ದ ವಸ್ತುಗಳನ್ನು   ನಮಗೆ ಮಾಹಿತಿ ಇರುತ್ತಿತ್ತು ಎಂದರೆ ಸರಿಯಲ್ಲ.  ಅಣ್ಣಪ್ಪರವರ ಜೀವಿತಾ ಕಾಲದಲ್ಲಿ ನಾನು , ನನ್ನ ಗಂಡ  ಮತ್ತು ಅಣ್ಣಪ್ಪರವರು ಯಾವ ದಾಖಲಾತಿಗಳನ್ನು ಮಾಡಿಕೊಂಡಿದ್ದೇವು ಎನ್ನುವ ಬಗ್ಗೆ   ನನ್ನ ಗಮನಕ್ಕೆ ಇರಲಿಲ್ಲ.  ಸದರಿ ಅಣ್ಣಪ್ಪರವರ ಜೀವಿತಾ ಕಾಲದಲ್ಲಿ ನಾನು ಮತ್ತು 4 ನೇ ಪ್ರತಿವಾದಿ ಯಾವ ದಾಖಲಾತಿಯನ್ನು  ಮಾಡಿಸಿಕೊಂಡಿದ್ದೇವು ಎಂದರೆ, ಸಾಕ್ಷಿಯು ನಮ್ಮ ಮಾವನವರು  ನನ್ನ ಹೆಸರಿಗೆ  ಇಂದೂರು ಗ್ರಾಮದಲ್ಲಿರುವ ಸರ್ವೇ ನಂಬರ್ 154 ಕ್ಷೇತ್ರ 2 ಎಕರೆ 19 ಗುಂಟೆಗೆ  ದಾನಪತ್ರ ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

**( ಈ ಹಂತದಲ್ಲಿ  ಮುಂದುವರೆದ  ಪಾಟೀ ಸವಾಲಿಗೆ  ಪ್ರತಿವಾದಿ ಪರ ವಕೀಲರು ಸಮಯವಕಾಶ ಕೇಳಿದ್ದು ಸಮಯವಕಾಶ ನೀಡಲಾಯಿತು )**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

Sd/-

**ಪ್ರ ದ ನ್ಯಾದಂ ಮುಂಡಗೋಡ.**